## ಭಾವೈಕ್ಯದ ಪ್ರತಿಪಾದನೆ

‘ಲಕ್ಷ್ಮಿ ಬಂದಾಳ’ (ಮಾ. 26, ಎಫ್.ಎಂ. ನಂದಗಾವ್) ಉತ್ತರ ಕರ್ನಾಟಕದ ಭಾಷಾ ಶೈಲಿಯಲ್ಲಿ ನಿರೂಪಣೆ ಮಾಡಿರುವ ಕಥೆ ಅಲ್ಲಿನ ಭಾಷಾ ಸೊಗಡನ್ನು, ಶೈಲಿಯನ್ನು ಚೆನ್ನಾಗಿ ಕಟ್ಟಿಕೊಟ್ಟಿದೆ. ಹಿಂದೂ, ಕ್ರಿಶ್ಚಿಯನ್, ಮುಸ್ಲಿಂ ಜನಾಂಗದವರಲ್ಲಿ ಪರಸ್ಪರ ಇರಬೇಕಾದ ಭಾವೈಕ್ಯವನ್ನು ಪ್ರತಿಪಾದಿಸಿದೆ.

—ಎಲ್. ಚಿನ್ನಪ್ಪ, ಬೆಂಗಳೂರು



## ಸರ್ವ ಧರ್ಮ ಸಮನ್ವಯತೆ

ಸಣ್ಣ ಊರುಗಳಲ್ಲಿ ಹಿಂದೂ, ಕ್ರೈಸ್ತ, ಮುಸ್ಲಿಂ, ಜೈನ ಹೀಗೆ ಎಲ್ಲಾ ಧರ್ಮಗಳಿಗೂ ಸೇರಿದ ಜನ ಸಾಮಾನ್ಯರು ಹೇಗೆ ಸಮನ್ವಯತೆಯಿಂದ ಬಾಳುತ್ತಿದ್ದಾರೆ ಎನ್ನುವುದನ್ನು ಕುತೂಹಲಕರ ರೀತಿ ಚಿತ್ರಿಸಿದ್ದಾರೆ.

—ಎಚ್.ಎಸ್. ಶ್ರೀಮತಿ, ಬೆಂಗಳೂರು

## ಗಹನ ನಿರೂಪಣೆ

ದೇಶ ವಿದೇಶಗಳಲ್ಲಿ ಸಿರಿತನದ ಸಂಕೇತವಾದ ‘ಲಕ್ಷ್ಮಿ’ಯನ್ನು ಯಾವ ಯಾವ ರೀತಿ ಪೂಜಿಸಿ ಆರಾಧಿಸುತ್ತಾರೆ ಎಂಬುದನ್ನು ಬಹಳ ಗಹನವಾಗಿ ಕಲೆಹಾಕಿ ಕಥಾರೂಪದಲ್ಲಿ ನಮ್ಮ ಮುಂದಿಟ್ಟಿದ್ದಾರೆ.

—ಶ್ರೀ ಸ್ವಾಮಿ




## ಸಂಗೀತದ ಹೊಸ ಜಗತ್ತಿನ ಅನಾವರಣ

‘ಇಂಡೀ ಸಂಗೀತ; ಹಾಡೊಂದು ಭಾವ ನೂರು!’ (ಮಾ. 26, ಉಮಾ ಅನಂತ್) ಮುಖಪುಟ ಲೇಖನ ಸಂಗೀತದ ಹೊಸ ಜಗತ್ತೊಂದನ್ನು ತೆರೆದಿಟ್ಟಿದೆ. ಸಾಂಪ್ರದಾಯಿಕ ಸಂಗೀತ ಒಂದು ವರ್ಗದವರಿಗೆ ಮಾತ್ರ ಸೀಮಿತವಾದರೆ, ಇಂಡೀ ಸಂಗೀತಕ್ಕೆ ಸಂಗೀತಪ್ರೇಮಿಗಳ ಜೊತೆಗೆ ಯುವಪೀಳಿಗೆಯನ್ನು ಸೆಳೆಯುವ ಮಾಂತ್ರಿಕ ಶಕ್ತಿಯಿರುವುದಕ್ಕೆ ಅದರ ಜನಪ್ರಿಯತೆಯೇ ಸಾಕ್ಷಿ. ಇದರ ವಿವಿಧ ಆಯಾಮಗಳನ್ನು ಮತ್ತು ಯುವ ಪ್ರತಿಭೆಗಳನ್ನು ಅರ್ಥವತ್ತಾದ ಲೇಖನದ ಮೂಲಕ ಪರಿಚಯಿಸಲಾಗಿದೆ.

—ಲತಾ ಹೆಗಡೆ, ಹುಬ್ಬಳ್ಳಿ

## ಈ ತಲೆಮಾರಿನ ಹೊಸತನ

ಕನ್ನಡ ಸಾಹಿತ್ಯದಂತೆ ಸಂಗೀತದಲ್ಲೂ ಹೊಸ ಪ್ರಯೋಗಳು ಮೊದಲಾಗುತ್ತಿವೆ. ಹೊಸ ಪ್ರಕಾರದ ಈ ಸಂಗೀತ, ಯುವಮನಗಳನ್ನು ಸೆಳೆಯುತ್ತಿದೆ. ಈ ತಲೆಮಾರಿಗೆ ತಕ್ಕಂತೆ ಇಂಡೀ ಸಂಗೀತ ರೂಪುಗೊಂಡಿರುವುದು ವಿಶೇಷ. ಯಾವುದೇ ಬೇಲಿಗಳಿಲ್ಲದ, ನಿಬಂಧನೆಗೆ ಒಳಪಡದ, ಸ್ವತಂತ್ರವಾಗಿ ರಚಿಸಿ, ಸಂಗೀತ ಸಂಯೋಜಿಸಿ ಹಾಡು ರೂಪಿಸಬಲ್ಲ ಈ ಮಾದರಿ ಸದ್ಯದ ಟ್ರೆಂಡ್ ಕೂಡ ಆಗಿದೆ. ಹೊಸ ಮಾದರಿಯ ಈ ಸಂಗೀತ ಇನ್ನಷ್ಟು ಜನಪ್ರಿಯವಾಗಲಿ.

—ಎಂ. ಅಶೋಕ್, ಬೆಂಗಳೂರು

## ಭೋಜನಪ್ರಿಯರಿಗೆ ಖುಷಿ

‘ಕರಾವಳಿಗರ ವಿಶೇಷ ಖಾದ್ಯ ಮನೋರ’ (ಮಾ. 26, ಲತಾ ಹೆಗಡೆ) ಲೇಖನ ಓದುತ್ತಿದ್ದ ಹಾಗೆ ಮನೋರ ಸವಿಯುವ ಮನಸ್ಸಾಯಿತು. ಸಾಂಪ್ರದಾಯಿಕ ಮದುವೆಗಳಲ್ಲಿ ಹಾಡುಗಳ ಮೂಲಕವೇ ವಿಶೇಷ ತಿನಿಸುಗಳ ಬಗ್ಗೆ ವಿವರಣೆ ಭೋಜನಪ್ರಿಯರಿಗೆ ಖುಷಿಯ ವಿಷಯ.

—ಓಂಕಾರ್ ಗುರುಸಿದ್ದಪ್ಪ ಕೊಟ್ರೆ, ಬೆಂಗಳೂರು

## ಮನಮೋಹಕ ‘ಮನೋರ’

ಕರಾವಳಿ, ಅದರಲ್ಲೂ ಮಲೆನಾಡು ಭಾಗದ ಸಂಸ್ಕೃತಿಯನ್ನು ಲೇಖಕಿ ಅಚ್ಚುಕಟ್ಟಾಗಿ ತೋರಿದ್ದಾರೆ. ಮಲೆನಾಡು ಮಗಳಾಗಿ ಬೆಂಗಳೂರು ಮತ್ತು ಹುಬ್ಬಳ್ಳಿ ನಿವಾಸಿಯಾಗಿ ಹಳೇ ನೆನಪುಗಳ ಮೂಲಕ ಮನಮೋಹಕ ‘ಮನೋರ’ವನ್ನು ಓದುಗರಿಗೆ ಉಣಬಡಿಸಿದ್ದಾರೆ.

—ವಿಶ್ವನಾಥ ವೆಂಕಟಸುಬ್ಬಯ್ಯ, ಬೆಂಗಳೂರು

## ಕಾಕತಾಳೀಯ ಪ್ರಬಂಧ

‘ಒಲೆಯೋ ಜೀವ ಸೆಲೆಯೋ’ (ಇಂದಿರಾ ಮೋಟೆಬೆನ್ನೂರ, ಯುಗಾದಿ ವಿಶೇಷಾಂಕ 2026) ಪ್ರಬಂಧ, ಕಾಕತಾಳೀಯವೆಂಬಂತೆ ಪ್ರಕಟಗೊಂಡಿದೆ. ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ವಾತಾವರಣದಿಂದ ಅಡುಗೆ ಗ್ಯಾಸ್ ಸಮಸ್ಯೆ ಉಲ್ಬಣವಾಗುತ್ತಿರುವ ಸಮಯದಲ್ಲಿ ಪ್ರಕಟಗೊಂಡಿದೆ. ಪರಿಸ್ಥಿತಿ ಹೀಗೇ ಮುಂದುವರೆದರೆ, ಲೇಖನದಲ್ಲಿ ತಿಳಿಸಿರುವ ಎಲ್ಲಾ ರೀತಿಯ ಒಲೆಗಳು ಮುನ್ನೆಲೆಗೆ ಬರುತ್ತವೆ.

—ಸುಬ್ರಹ್ಮಣ್ಯ ಕಲ್ಲೂರ್

## ಭಾರಿ ಅಜೀಬ್ ಅನ್ನಸ್ತು!

‘ಕಿಸೀಲಿಲ್ಲ ಮಸೀಲಿಲ್ಲ, ಕುಸೂಗಲ್ ಹಾಳಾಗಿತ್ತಂತ್!’ (ಮಾ. 26, ಬಸವರಾಜ ಸಾದರ) ‘ಚೆನ್ನುಡಿ’ಯಲ್ಲಿ ಈ ಮಜಕೂರ ಓದಿದ ಮ್ಯಾಲೆ ನನಗೂ ಸಹಿತ ಭಾರಿ ಅಜೀಬ್ ಅನ್ನಸ್ತು.

ಇದರಂಥಾ ಹಜಾರ್ ಗಾದಿ ಮಾತುಗೋಳು ನಮ್ಮ ಉತ್ತರ ಕರ್ನಾಟಕದ ಮಂದಿ ಬಾಯಾಗ ಅದಾವ್ರಿ. ಆದ್ರ ಖರೆ ಖರೆ ಅರ್ಥಾ ಏನೈತಿ ಅಂತ ಈಗ ತಿಳಸೌವ್ರು ಎಷ್ಟ್ ಮಂದಿ ಅದಾರು? ಹಂಗೊಂದ್ ವ್ಯಾಳೆ ಹಳ್ಳೀ ಹಿರೇರ ಹತ್ರ ಈ ಗ್ನಾನ (ಜ್ಞಾನ) ಇದ್ರೂ ಸೈತ ಈಗೀನ್ ಮೊಬೈಲ್ ಮಕ್ಕಳಿಗೆ ಇಂಥಾ ಮಜಕೂರ ತಿಳಿಯೂ ವ್ಯವಧಾನ ಐತಿ ಅನ್ನೂದ ಸಂಶಯ.

—ಪ್ರೊ. ಬಸಪ್ಪ ಯ. ಬಂಗಾರಿ, ಬೆಂಗಳೂರು

## ಅಪೂರ್ವ ಬರಹ

ಒಂದು ಉಲ್ಲಾಸಕರ ಓದು. ಪಾಪು ಅವರ ಸೋಪಜ್ಞ ನಿರೂಪಣೆ ಲೇಖನದ ಘನತೆಯನ್ನು ಅಪೂರ್ವವಾಗಿಸಿದೆ. ಸಾಂದರ್ಭಿಕ ಔಚಿತ್ಯದೊಂದಿಗೆ ಬಳಸಲಾದ ಗಾದೆ ಮಾತುಗಳು ಮನರಂಜನೆಯೊಂದಿಗೆ ಚಿಂತನೆಗೂ ಅವಕಾಶ ನೀಡುತ್ತವೆ. ಎಷ್ಟೆಂದರೂ ಉತ್ತರ ಕರ್ನಾಟಕದ ಕನ್ನಡ ಅಲ್ಲವೇ. ಶ್ರೀಸಾಮಾನ್ಯರ ಆಡುಗದ್ಯಕ್ಕೂ ಪದ್ಯದ ನವಿರು.



1970ರಲ್ಲಿ ಆಕಾಶವಾಣಿ ಬೆಂಗಳೂರು ನಿಲಯ ಕನ್ನಡ ಭಾರತಿ ಸಾಹಿತ್ಯ ಸಂಚಿಕೆಯನ್ನು ಭಾನುವಾರ ರಾತ್ರಿ 9.15ಕ್ಕೆ ಪ್ರಸಾರ ಮಾಡುತ್ತಿತ್ತು. ಅದನ್ನು ಪ್ರಸ್ತುತಪಡಿಸುತ್ತಿದ್ದವರು ಬಸವರಾಜ ಸಾದರ್. ನಮ್ಮ ಹೈಸ್ಕೂಲ್ ದಿನಗಳ ಆ ಕಾರ್ಯಕ್ರಮ ನಮ್ಮಂತಹವರಲ್ಲಿ ಸಾಹಿತ್ಯದ ಅಭಿರುಚಿ ಪೋಷಿಸಿದ ಕಾರ್ಯಕ್ರಮವಾಗಿತ್ತು. ಬಸವರಾಜರ ನಿರೂಪಣೆ, ಪ್ರಬುದ್ಧತೆ ಮತ್ತು ಆತ್ಮೀಯತೆಗಳ ಹದವರಿತ ಪಾಕ. ಈ ಲೇಖನ ಅವರಲ್ಲಿನ ವಿನೋದಶೀಲತೆಯನ್ನು ಪರಿಚಯಿಸಿ ದೀರ್ಘ ಕಾಲದ ನಂತರ ಸಿಕ್ಕ ಸ್ನೇಹಿತನಂತೆ ಮುದ ನೀಡಿತು.

—ಶಂಕರ್ ಸೊರವನಹಳ್ಳಿ, ಮಾಯಸಂದ್ರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in